Regd. No. M 1299 SATYAVADI Founded 1917

ಸತ್ಯವಾದಿ
SATYAVADI

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 78] ಮಂಗಳವಾರ 19—11—46 [ಬಿಡಿ ಪ್ರತಿ 3 ಪೈ

ಮಿತ್ರರ ಮೇಲೆ ಜಪಾನ್ ಯುದ್ಧಕ್ಕೆ ಧಿಕ್ಕಾರ

ಜ॥ ಟೋಜೋ ತಾನು ಜವಾಬ್ದಾರ

ಎಂದು ಟೋಕಿಯೋದಲ್ಲಿ ತಾ ೧೮ ರಲ್ಲಿ ಮಿತ್ರ ನ್ಯಾಯಾಸ್ಥಾನದಲ್ಲಿ ಅವನಿಗೆ ಹಾಕಿದ ಪ್ರಶ್ನೆಯಲ್ಲಿ " ಒಪ್ಪಿಕೊಂಡಿರುವನು.

ವೃತ್ತಾಂತ ಸಂಗ್ರಹ

ಲಂಡನ್ ನ 18 — ಲಂಡನ್ ನಗರದ ಭಾರಿ ಚೌಕವೊಂದರಲ್ಲಿ ರೂಸ್ವೆಲ್ಟ್ ಪ್ರತಿಮೆಯನ್ನು ನಿರ್ಮಿಸಲಿರುವರು. ಈ ಬಗ್ಗೆ ಸಾರ್ವಜನಿಕ ನಿಧಿ ಸಂಗ್ರಹ ಅರಂಭೋತ್ಸವವನ್ನು ಪ್ರಧಾನಿ ಅಟ್ಲಿ ನಿನ್ನೆ ರಾತ್ರಿ ನೆರವೇರಿಸಿದರು.

೦ ೦

ಬೆಂಗಳೂರು ನ 15 — ಕಾಶಿ ಹಿಂದೂ ವಿಶ್ವವಿದ್ಯಾನಿಲಯ ಸ್ಥಾಪಕ ಪಂ॥ ಮದನ ಮೋಹನ ಮಾಳವೀಯರ ನಿಧನದ ಬಗ್ಗೆ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಮಂಡಿಸಲ್ಪಟ್ಟ ಸಂತಾಪ ಸೂಚಕ ನಿರ್ಣಯವನ್ನು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ್ದಲ್ಲವೆಂದು ತಳ್ಳಿಹಾಕಿದರು.

೦ ೦

ನವದೆಹಲಿ ನ 17 — ಬೀಹಾರ್ ಗಲಭೆಗಳಿಗೆ ಕಾಂಗ್ರೆಸ್ಸೇ ಹೊಣೆ, ಗವರ್ನರ್ ಕರ್ತವ್ಯ ಲೋಪ ಮಾಡಿದ್ದಾರೆ ತಪಿತಸ್ಥರಿಗೆ ಶೀಕ್ಷೆ ಅತ್ಯಗತ್ಯ ಎಂದು ಅಖಿಲ ಭಾರತ ಮುಸ್ಲಿಂ ಲೀಗ್ ಚಳುವಳಿ ಸಮಿತಿ ನಿರ್ಣಯಿಸಿದೆ.

೦ ೦

ನವದೆಹಲಿ ನ 18 — ಕೇಂದ್ರ ಸಭೆಯಲ್ಲಿ ಆಪರೋಧವಾಗಿ ರಚನಾತ್ಮಕ ಸಭೆಯ ವೆಚ್ಚಕ್ಕಾಗಿ ರೂ. 1783000 ಮಂಜೂರಾಯಿತು.

೦ ೦

ನವದೆಹಲಿ ನ 18 — ಎ॥ ಐ.ಐ. ಚುಂದ್ರಿಗರ್‌ರವರು ಯು. ಎ ಆರ್. ಆಫ್. ಎ ಸಂಸ್ಥೆಗೆ ಭಾರತ 2 ಕೋಟಿ ರೂ. ಕೊಡಬೇಕು ಎಂಬ ಸೂಚನೆಯನ್ನು ಕೇಂದ್ರ ಸಭೆಯಲ್ಲಿ ತಂದರು. ವಿರೋಧ ಕಂಡು ಬಂದು ಸೂಚನೆಯನ್ನು ಹಿಪಸು ಪಡೆಯಲಾಯಿತು.

ಪಂ॥ ನೆಹರುವಿಗೆ ಬ್ರಿಟೀಷ್ ಸಹಾಯನೇಕೆ

ಬಿಹಾರ್ ಘಟನೆಗಳನ್ನು ಕುರಿತು ಪಂ॥ ನೆಹರುರವರು ಗುಂಡು ಹಾರಿಸಲಾಗುತ್ತದೆ. ಅವಶ್ಯ ಬಿದ್ದರೆ ಬಾಂಬು ಪ್ರಯೋಗಿಸಲಾಗುತ್ತದೆ. ಎಂದು ಎಚ್ಚರಿಕೆಯಿತ್ತರಷ್ಟೆ ! ಪಂ॥ ನೆಹರು ಈ ಕಾರ್ಯಗಳಿಗೆ ಬ್ರಿಟಿಷ್ ಪಡೆಗಳನ್ನು ಉಪಯೋಗಿಸ ಬಾರದೆಂದೂ ಬ್ರಿಟೀಷರು ಭಾರತ ಬಿಟ್ಟು ತೊಲುಗುವಾಗ ಭಾರತೀಯರು ನಿರ್ವಹಿಸಬೇಕಾದ ಕಾರ್ಯಕ್ಕೆ ಬ್ರಿಟೀಷ್ ಸೇನೆ ಸಹಾಯ ಏಕೆ? ಎಂಬುದಾಗಿ ಲಾರ್ಡ್ ಬೇವರ್ ಬ್ರೂಕ್ ಪ್ರಶ್ನಿಸಿರುವುದಾಗಿ ಗೊತ್ತಾಗಿದೆ.

ಬಂಗಾಳಾ ಸಮಾಚಾರ

ಪೂರ್ವ ಬಂಗಾಳಾದ ದಂಗೆಯಲ್ಲಿ ಸಿಲುಕಿ, ಕಷ್ಟಪಡುತ್ತಿರುವ ಹಿಂದೂಗಳ ಸಹಾಯಕ್ಕಾಗಿ ಮತ್ತು ಧರ್ಮಾಂತರವಾದವರನ್ನು ಪುನಃ ಹಿಂದೂಧರ್ಮಕ್ಕೆ ಸ್ವೀಕರಿಸುವುದಕ್ಕಾಗಿ ಅ. ಭಾ. ವರ್ಣಾಶ್ರಮ ಸ್ವರಾಜ್ಯ ಸಂಘದ ಪರವಾಗಿ ಮುಂಬಯಿಯ ವಲ್ಲಭಭಾಜಾರ್ಕ್ ಪೀಠಾಧೀಶರಾದ ಶ್ರೀ ಕೃಷ್ಣಜೀವನಜಿ ಹಾಗೂ ಶ್ರೀ ದೇವನಾಯಕಾಚಾರ್ಯರೂ ಪರಿವಾರ ಸಮೇತವಾಗಿ ವಿಮಾನದಲ್ಲಿ ಕಲ್ಕತ್ತೆಗೆ ಹೋಗಿ, ಅಲ್ಲಿನ ಸ್ಥಿತಿಗತಿಗಳನ್ನು ಲೋಕಿಸಿದರು. ದೇವದಾಯಕಾಚಾರ್ಯರು ಧರ್ಮವೀರ ದಳದೊಂದಿಗೆ ದಂಗೆ ನಡೆದ ನೋಯಾಖಾಲೀಗೆ ಹೋಗದಾರೆ. ಅಲ್ಲಿನವರು ಪೀಡಿತರಿಗೆ ಸಹಾಯವನ್ನೂ ದಗಿಸುವುದಲ್ಲದೆ ಶುದ್ಧೀ ಕಾರ್ಯವನ್ನೂ ನಡೆಸುವರು.

೦ ೦

ನಂಜನಗೂಡು — ಇದೇ ತಾ॥ 21 ನೇ ಗುರುವಾರ ಸಂಜೆ 5 ಗಂಟೆಗೆ ಧನ್ವಂತರಿ ಜಯಂತಿಯನ್ನು ಭೀಷ ರತ್ನ ಶ್ರೀ ಬಿ. ವಿ. ಪಂಡಿತರು ತಮ್ಮ ಸ್ವಗೃಹದಲ್ಲಿ ನೆರವೇರಿಸುವರು.

ಆಣು ಬಾಂಬಿನ ಭೀತಿ !

ನ್ಯೂಯಾರ್ಕ್ ನ17— ಆಟಂ ಬಾಂಬನ್ನು ಎದುರಿಸುವ ಅಸ್ತ್ರವಿಲ್ಲವೆಂದೂ ಯುದ್ಧದಲ್ಲಿ ಆಟಂ ಬಾಂಬು ಉಪಯೋಗಿಸಿದಲ್ಲಿ ದೇಶವೇ ಹಾಳಾಗಿ ನಾಗರೀಕತೆ ನಿರ್ಮೂಲವಾಗುವುದೆಂದೂ ಆದುದರಿಂದ ಬ್ಯಾಂಬಿನ ಸಂಘಿಕವಾದ ತೊಡಕನು ಜನರಲ್ಲಿ ಬೋಧಿಸಿ ಯುದ್ಧ ನಡೆಯದಂತೆ ಮಾಡಬೇಕೆಂದೂ ಅದಕ್ಕಾಗಿ 10 ಲಕ್ಷ ಡಾಲರು ನಿಧಿ ಶೇಖರಿಸಬೇಕೆಂದೂ ಫ್ರೊ ಇನ್‌ಸ್ಟಿಟ್ಯೂಟ್ ಮತ್ತು ಇನ್ನೂ ಕೆಲ ಪ್ರಖ್ಯಾತ ರಸಾಯನ ಶಾಸ್ತ್ರಜ್ಞರು ಸಂಸ್ಥೆಯೊಂದನ್ನು ಮಾಡಿಕೊಂಡಿದ್ದಾರೆ.

ಸರ್ ಮಿರ್ಜಾರವರ ಉದಾರ ಸಹಾಯ

ಮೊಳಕಾಲ್ಮೂರು: ಮೈಸೂರು ಸಂಸ್ಥಾನದ ಸಿವಿಲ್ ದಿವಾನರು ಮತ್ತು ಹೈದರಾಬಾದ್ ನಿಜಾಂ ಕಾರ್ಯಾಂಗದ ಅಧ್ಯಕ್ಷರೂ ಆದ ಸರ್ ಮಿರ್ಜಾ ಎಂ. ಇಸ್ಮೈಲ್‌ರವರು ರಾಂಪುರ ಮಾಧ್ಯಮಿಕ ಶಾಲೆಯ ಬಡ ವಿದ್ಯಾರ್ಥಿಗಳ ನಿಧಿಗೆ ರೂ. 50 ಉಭಾರಿ ದಾನಪತ್ತಿದ್ದಾರೆ

ಭಾರತವಿಜ್ಞಾನಕ್ಕಾಂಗ್ರೆಸ್

ನವದೆಹಲಿ ನ 17 - ಭಾರತ ವಿಜ್ಞಾನ ಕಾಂಗ್ರೆಸಿನ 34 ನೇ ಅಧಿವೇಶನವು ಮುಂದಿನ ವರ್ಷ ದೆಹಲಿಯಲ್ಲಿ ಪಂ॥ ನೆಹರು ಅಧ್ಯಕ್ಷತೆಯಲ್ಲಿ ನೆರವೇರುವುದು.

ಸಂತಾಪ ಸೂಚಕ ಸಭೆ

ಸೈಮನ್ ಸಂಸ್ಥಾನದ ಅನೇಕ ಸ್ಥಳಗಳಲ್ಲಿ ಪಂ॥ ಮಾಳವೀಯರ ನಿಧನಕ್ಕಾಗಿ ಸಂತಾಪ ಸೂಚಕ ಸಭೆಗಳು ಜರುಗಿದವು.

ಬ್ರಿ॥ ಪಾರಸಭೆಯಲ್ಲಿ ಭಾರತೀಯ

ಈಚೆಗೆ ನಡೆದ ಬ್ರಿಟನ್ನಿನ ಪೌರ ಜನಾವಣೆಯೊಂದರಲ್ಲಿ ಭಾರತೀಯನಾದ (ಡಾಕ್ಟರ್) ಜೈಮಿ ಎಂಬಾತನನ್ನ ಕನ್ಸರ್‌ವೇಟೀವ್ ಪಕ್ಷದ ಎದುರಾಳಿಯನ್ನು ಸೋಲಿಸಿ, ವಿಜಯಿಯಾದನೆಂದು ತಿಳಿಯಬಂದಿದೆ.

ಗಾಂಧೀಜಿ

ಮೀರತ್‌ನಲ್ಲಿ ನಡೆಯುವ ಕಾಂಗ್ರೆಸ್ ಮಹಾಧಿವೇಶನಕ್ಕೆ ಗಾಂಧೀಜೀ ಅಗಮಿಸುವುದಿಲ್ಲವೆಂದು ಆಚಾರ್ಯ ಕೃಪಲಾನಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ನೆಹರೂರವರಿಗೆ ಶುಭಾಶಯ

ನವದೆಹಲಿ — ಪಂ॥ ನೆಹರೂರವರ ಹುಟ್ಟಿದ ಹಬ್ಬದ ದಿವಸ ಚೈನಾದ ಪ್ಯಾಡಂ ಚಿಯಾಂಗ್ , ಕೈಷೇಕರು ಶುಭಾಶಯ ಕೋರಿ ತಂತಿ ಕಳುಹಿಸಿರುವರು.

ಸರಿಸಮಾನತೆ

ಮದರಾಸು ನ 18 — ಸರಕಾರದ ಇಲಾಖೆಗಳಲ್ಲಿ ಕೆಲಸಕೊಡುವ ವಿಚಾರದಲ್ಲಿ ಐ. ಎಫ್. ಎ; ಜನರು ಮಾಜಿ ಸೈನಿಕರು ಸರಿಸಮಾನವಾಗಿ ಕಾಣಲಾಗುವ ದೆಂದು ಸರಕಾರಿ ಆಜ್ಞೆಯಾಗಿದೆ.

ಲಂಚಗೊಳಿತನ ನಿರ್ಮೂಲಕ್ಕೆ

ನವದೆಹಲಿ ನ 18 — ಕೇಂದ್ರ ಸಭೆಯಲ್ಲಿ ಗೃಹ ಮಂತ್ರಿ ಸರದಾರ್ ಪಟೇಲರು ಲಂಚ ಗೊಳಿತನ ನಿರ್ಮೂಲಕ್ಕೆ ಹೊಸದೊಂದು ಮಸೂದೆಯನ್ನು ಮಂಡಿಸಿರುವರು

ಮಿ! ಜಿನ್ನಾರು

ನವದೆಹಲಿ ನ 18 — ಜಿನ್ನಾರು ಬ್ರಿಧನಾಧಿಕಾರಿಗಳಿಗೆ ಭೇಟಿ ಕೊಡುವರು

ರಷ್ಯನರ ಆಹಾರ ಸರಬರಾಜು

ಲಂಡನ್ ನ 18 — ಜರ್ಮನಿಯ ಬ್ರಿಟಿಷ್ ಭಾಗಕ್ಕೆ ರಷ್ಯನರು ಆಹಾರವನ್ನು ರವಾನಿಸಿರುವರು.

ಗಣಿ ಮುಚ್ಚಕೂಡದು

ವಾಷಿಂಗ್ಟನ್ ನ 17— ಕಲ್ಲಿಜ್ಜಲು ಗಣಿ ಕೆಲಸಗಾರರ ಮುಷ್ಕರದ ಬೆದರಿಕೆಗಾಗಿ, ಅಮೇರಿಕಾ ಸರಕಾರವು ತಮ್ಮ ಅಧೀನದಲ್ಲಿರುವ 3300 ಗಣಿಗಳನ್ನು ಸದಾ ತೆಗೆದಿರುವಂತೆ ಆಜ್ಞೆ ಮಾಡಿದೆ.

ನಾಮಸ್ಮರಣೆಯ ಮೇಲೆ ಪ್ರತಿಬಂಧ

ಅಲಹಾಬಾದಿನಲ್ಲಿ ನಡೆಯುತ್ತಿದ್ದ ಸಂಕೀರ್ತನ ಸಮ್ಮೇಳನವನ್ನು ಸರಕಾರವು ಪ್ರತಿಬಂಧಿಸಿದ್ದನ್ನೂ, ಸಮ್ಮೇಳನದ ಕಾರ್ಯಕರ್ತರಾದ ಪ್ರಭುದತ್ತ ಬ್ರಹ್ಮಚಾರಿ ಮುಂತಾದವರನ್ನು ದಸ್ತಗಿರಿ ಮಾಡಿದ್ದನ್ನು ತೀವ್ರವಾಗಿ ಖಂಡಿಸುತ್ತೇವೆ. ಮತ್ತು ಸಮ್ಮೇಳನದ ಮೇಲಿನ ಪ್ರತಿಬಂಧಕವನ್ನು ಕೂಡಲೆ ಹಿಂತೆಗೆದು ಕೊಳ್ಳಬೇಕಾಗಿಯೂ ದಸ್ತಗಿರಿಯಾದ ಸಾಧು ಜನರನ್ನು ಕೂಡಲೆ ಬಿಡುಗಡೆ ಮಾಡಬೇಕಾಗಿಯೂ ಇಚ್ಛಿಸುತ್ತೇವೆ' ಎಂಬ ತಂತಿಯನ್ನು ಅ. ಭಾ. ಧರ್ಮ ಸಂಘದ್ಯಕ್ಷರಾದ ಶ್ರೀ ಜಗದ್ಗುರುಗಳವರು ಸಂಯುಕ್ತ ಪ್ರಾಂತ್ಯದ ಗವರ್ನರಿಗೂ, ಮುಖ್ಯ ಮಂತ್ರಿ ಗೋವಿಂದವಲ್ಲಭ ಪಂತರಿಗೂ ಇತರ ಮಂತ್ರಿಗಳಿಗೂ ಕಳಿಸಿದ್ದಾರೆ.

ಈ ತಂತಿಯನ್ನು ಪ್ರಕಟನೆಗಾಗಿ ಹಿಂದುಸ್ಥಾನದ ಮುಖ್ಯಮುಖ್ಯ ಪತ್ರಿಕೆಗಳಿಗೂ, ವಾರ್ತಾ ಪ್ರಚಾರಕ ಸಂಸ್ಥೆಗಳಿಗೂ ಕಳಿಸಲಾಗಿದೆ.

ವಾಚಕರೆ ಹಿಂದೂಗಳ ದುರವಸ್ಥೆಯನ್ನು ನೋಡಿರಿ. ಭಗವನ್ನಾಮ ಸಂಕೀರ್ತನೆಗೂ ಈಗಿನ ಸರಕಾರಗಳು ಅಡ್ಡಿ ಮಾಡುತ್ತಿವೆ. ಇತರ ಕೋಮಿನವರು ಭಯಂಕರ ದಂಗೆ ಅತ್ಯಾಚಾರಗಳನ್ನು ಮಾಡುತ್ತಿದ್ದರೂ ಅವರನ್ನು ಸರಿಯಾಗಿ ಶಿಕ್ಷಿಸದೆ, ಸುಮ್ಮನೆ ಸರಕಾರವು ನೋಡುತ್ತಿದೆ. ಇತ್ತ ನಾಮಸ್ಮರಣೆ ಮಾಡುವ ಸಾಧು ಸಂತರನ್ನೂ ಸಮ್ಮೇಳನವನ್ನೂ ಪ್ರತಿಬಂಧಿಸುತ್ತಿದೆ. ಇದೆಂತಹ ಶೋಚನೀಯ ಸ್ಥಿತಿ ! ಸರಕಾರಗಳ ಇಂತಹ ಕಾರ್ಯವು ಸರ್ವಥಾ ಖಂಡನೀಯವಾಗಿವೆ.

ಹಿಂದೂಗಳೇ, ಇನ್ನಾದರೂ ಜಾಗೃತರಾಗಿರಿ. ಸುಸಂಘಟಿತರಾಗಿರಿ.

ಜನವರ್ಷದ ಸೋವಿಯೆಟ್ ಫಿಲಂ ಅಭಿವೃದ್ಧಿ ಯೋಜನೆ

ಸೋವಿಯೆಟ್ ಸಿನೇಮೊಟೊಗ್ರಾಫಿಯ ಅಭ್ಯುದಯಕ್ಕಾಗಿ ಸೋವಿಯೆಟ್ ಸರಕಾರವು ಐದು ಪಂಚ ವಾರ್ಷಿಕ ಯೋಜನೆ ತಯಾರಿಸಿರುವುದು. ಪ್ರತಿಯೊಂದು ಪಟ್ಟಣ ಮತ್ತು ಹಳ್ಳಿಗಳಲ್ಲಿ ಸಿನೇಮಾಗಳ ವ್ಯವಸ್ಥೆ ಮಾಡುವುದು ಈ ಯೋಜನೆಯು ಪೂರ್ಣ ಗೊಳ್ಳುವಾಗ ಸೋವಿಯೆಟ್ ದೇಶದಲ್ಲಿರುವ ಸಿನೇಮಾಗಳ ಸಂಖ್ಯೆ ೪೬೭೦೦ ಕ್ಕೇರುವುದು. ಯುದ್ಧ ಪೂರ್ವದಲ್ಲಿ ಈ ಸಂಖ್ಯೆ ೨೮೭೦೦ ಇತ್ತು.

ಅಕ್ಕರ ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

For Good Printing

L. N. Press

Sriampet, MYSORE

ಚಳಿ ಜ್ವರಕ್ಕೆ

ಉಚಿತವಾಗಿ ಔಷಧವನ್ನು ಕೊಡಲಾಗುವುದು.

ಆಶೀಕಾಫಾರ್ಮಸಿ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಶಕ್ತಿಸುಧಾ ಸೇವಿಸಿ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ

ನಿಸ್ಸಾರವಾದ, ಸತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.

ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು

SHAKTI SUDHA

For Rich Blood, Strong Nerves & Exuberant Vitality

Talk-a-Tone

Premier Film Mag. of S. India

Local Agent— D. Mahaadev

c/o Opera Talkies,,Myso

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಅರಾಣೆ

ಸೋಮವಾರದ ಸಂಚಿಕೆ

ವಾರ್ಷಿಕಚಂದಾ

ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

Edited, Printed and Published by M. S Krishna Rao at the Satyavadi Press Chamaraj Agrahr Mysore.

At Opera

4th Houseful Week

Sri Murugan

ಶ್ರೀ ಮುರುಗನ್

ಹೊನ್ನಪ್ಪ ಭಾಗವತರ್, ಕಮಲಿ ಎಕ್ಕ ರತ್ನ, ಮಾಲತಿ, ಜೀವರತ್ನ, ಯೋಗ ಮಂಗಳಂ ಮುಂತಾದವರು

ಪಾತ್ರವಹಿಸಿರುವರು (ತಮಿಳು ಚಿತ್ರ)

At Ranjit_____ From 15-11-46

ಸೂರಿಯಾ - ಪಹರಿ ಸನ್ಯಾಲ್ - ಷಾ ನವಾಜ್

ಪಾತ್ರವಹಿಸಿರುವ

ಮೈಕ್ಯಾಕರೂಂ

Mai Kya Karam

ಪ್ರತಿದಿನ 3 ಆಟಗಳು .... ಆಮೋಘ ಹಿಂದಿ ಚಿತ್ರ

ಸುಖ ಆರೋಗ್ಯ ಆನಂದದಾಯಕ

ಜೀವಿತಕ್ಕೆ



ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದ್ದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

೧೫೫, ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.